[2020] 2 S.C.R. 789

ಮಲ್ಲೂರು ಮಲ್ಲಪ್ಪ (ಮೃತ -ಉತ್ತರಾಧಿಕಾರಿಗಳಿಂದ)

ವಿ.

ಕುರುವತಪ್ಪ ಮತ್ತು ಇತರರು.

(2020ರ ಸಿವಿಲ್ ಮೇಲ್ಮನವಿ ಸಂಖ್ಯೆ 1485)

ಫೆಬ್ರುವರಿ 12,2020

[ಎಸ್. ಅಬ್ದುಲ್ ನಜೀರ್ ಮತ್ತು ಸಂಜೀವ್ ಖನ್ನಾ, ನ್ಯಾಯಮೂರ್ತಿಗಳು).]

ಸಿವಿಲ್ ಪ್ರಕ್ರಿಯಾಸಂಹಿತೆ, 1908-ಕಲಂ.96, 100 ಮತ್ತು ಆದೇಶ .XLI, ನಿಯಮ.31 - ವಾದಿಯುಪ್ರತಿವಾದಿಗಳ ವಿರುದ್ಧ ದಾವೆ ಹೂಡಿ, ದಾವಾ ಸೊತ್ತು ಮಾರಾಟ ಮಾಡುವ ಕ್ರಯ ಒಪ್ಪಂದ ಕರಾರನ್ನು ಪಾಲಿಸುವಂತೆ ತೀರ್ಪು ನೀಡಬೇಕೆಂದು ಕೋರಿದ್ದರು -1ನೇ ಪ್ರತಿವಾದಿ ದಾವೆಯು ಕಾಲಪರಿಮಿತಿಯನ್ನು ಮೀರಿರುವುದರಿಂದ ದಾವಾ ವಜಾ ಆಗಬೇಕೆಂದು, ಹಾಗೂ ತಾವು ಒಪ್ಪಂದದ ತನ್ನ ಭಾಗದ ಕರಾರನ್ನು ನಿರ್ವಹಿಸಲು ಸಿದ್ಧನಿಲ್ಲ ಮತ್ತು ತಯಾರಿಲ್ಲ ಎಂದು ವಾದಿಸಿದ್ದು - ದಾವೆಯನ್ನು ವಜಾ ಮಾಡಿದ್ದು ಅದನ್ನು ಉಚ್ಚ ನ್ಯಾಯಾಲಯ ದೃಡೀಕರಿಸಿದೆ. **ತೀರ್ಪಿನ ಮುಖ್ಯಾಂಶ** : ಕಲಂ 96ರ ಪ್ರಕಾರ ಯಾವುದೇ ಮೂಲ ಅಧಿಕಾರ ವ್ಯಾಪ್ತಿ ಇರುವ ನ್ಯಾಯಾಲಯ ನೀಡಿದ ತೀರ್ಪಿನ ವಿರುದ್ಧ ಅಂತಹ ಮೇಲ್ಮನವಿಯನ್ನು ಸ್ವೀಕರಿಸುವ ಮೇಲಿನ ನ್ಯಾಯಾಲಯಕ್ಕೆ ಇರುತ್ತದೆ. ಪ್ರಸಕ್ತ ವ್ಯಾಜ್ಯದಲ್ಲಿ ತೀರ್ಪಿನ ವಿರುದ್ಧದ ಮೇಲ್ಮನವಿ ಉಚ್ಚ ನ್ಯಾಯಾಲಯಕ್ಕೆ ಇರುತ್ತದೆ. ಮೇಲ್ಮನವಿ ಎಂದರೆ ಮೂಲ ನ್ಯಾಯಾಲಯದ ನಡುವಳಿಕೆಗಳು ಮುಂದುವರಿದಂತೆ. ಸಾಮಾನ್ಯವಾಗಿ, ಮೇಲ್ಮನವಿಯಲ್ಲಿನ ಅಧಿಕಾರವ್ಯಾಪ್ತಿ ಕಾನೂನು ಅಂಶದ ಮೇಲೆ ಪುನಹ ವಾದಗಳನ್ನು ಕೇಳುವುದು ಹಾಗೂ ಕೇಸಿನಲ್ಲಿ ಅಡಕವಾದ ವಿಷಯಗಳ ಬಗ್ಗೆಯೂ ವಾದಗಳನ್ನು ಕೇಳುವುದು. ಭಾದಿಸಲ್ಪಟ್ಟ ವ್ಯಕ್ತಿ ಈ ಬಗ್ಗೆ ವಾದಿಸುತ್ತಾರೆ. ಮೊದಲನೆಯ ಮೇಲ್ಮನವಿ ಮೇಲ್ಮನವಿದಾರರ ತುಂಬಾ ಅಮೂಲ್ಯವಾದ ಹಕ್ಕು. ಇದರಲ್ಲಿ ಕಾನೂನು ಅಂಶಗಳ ಮೇಲೆ ಹಾಗೂ ಪ್ರಕರಣದ ವಿಷಯಗಳ ಬಗ್ಗೆ ಮೂಲ ನ್ಯಾಯಾಲಯ ನೀಡಿದ ತೀರ್ಪಿನ ಅಂಶದ ಬಗ್ಗೆ ಪುನಹ ನಿರ್ಣಯಕ್ಕೆ ತೆಗೆದುಕೊಳ್ಳಲಾಗುತ್ತದೆ. ಕಲಂ 96 ರ ಅಡಿ ಬರುವ ಮೇಲ್ಮನವಿ, ಕಲಂ 100ರ ಅಡಿಯಲ್ಲಿ ಬರುವ 2ನೇ ಮೇಲ್ಮನವಿಗಿಂತ

ಪೂರ್ತಿಯಾಗಿ ಭಿನ್ನವಾಗಿದೆ. ಕಲಂ 100ರ ಅಡಿ ಮೇಲ್ಮನವಿಯಲ್ಲಿ ಕಾನೂನಿನ ಪ್ರಶ್ನೆ ಒಳಗೊಂಡಿರದ ಹೊರತು ಎರಡನೇ ಮೇಲ್ಮನವಿಯನ್ನು ಸ್ಪಷ್ಟವಾಗಿ ನಿಷೇಧಿಸುತ್ತದೆ ಮತ್ತು ಹಾಗೆ ಒಳಗೊಂಡಿರುವ ಕಾನೂನಿನ ಪ್ರಶ್ನೆ ಗಂಬೀರ ಸ್ವರೂಪದ್ದಾಗಿರಬೇಕು. ಪ್ರಸ್ತುತ ಪ್ರಕರಣದಲ್ಲಿ, ಕ್ರಯ ಒಪ್ಪಂದದ ತನ್ನ ಭಾಗದ ಕರಾರನ್ನು ನಿರ್ವಹಿಸಲು ವಾದಿ ಸಿದ್ದನಿಲ್ಲ ಹಾಗೂ ತಯಾರಿಲ್ಲ ಎಂಬ ವಿವಾದಾಂಶ ವಾದಿಗೆ ವಿರುದ್ಧವಾಗಿ ಉತ್ತರಿಸಿ ಅವರ ದಾವೆಯನ್ನು ವಜಾ ಮಾಡಲಾಗಿದೆ. -ಉಚ್ಚ ನ್ಯಾಯಾಲಯದ ಮುಂದೆ ಮೇಲ್ಮನವಿಯು ಕಾನೂನು ಮತ್ತು ವಸ್ತುಸ್ಥಿತಿಯ ಪ್ರಶ್ನೆಗಳನ್ನು ಒಳಗೊಂಡಿತ್ತು ಆದರೆ ಇವ್ಯಾವುದೇ ಅಂಶಗಳನ್ನು ಪರಿಶೀಲಿಸದೆ ಉಚ್ಚನ್ಯಾಯಾಲಯ ಮೇಲ್ಮನವಿಯನ್ನು ಅತ್ಯಂತ ಸಂಕ್ಷಿಪ್ತ ಆದೇಶದ ಮೂಲಕ ವಜಾಗೊಳಿಸಿತು-ಉಚ್ಚ ನ್ಯಾಯಾಲಯವು ಆದೇಶ XLI, ರೂಲ್ .31 ರ ನಿಯಮವನ್ನು ಮೇಲ್ಮನವಿಯನ್ನು ನಿರ್ಧರಿಸುವಾಗ ಪಾಲಿಸಿಲ್ಲ. ಕಾರಣ ಉಚ್ಚ ನ್ಯಾಯಾಲಯದ ತೀರ್ಪನ್ನು ರದ್ದು ಪಡಿಸಿದೆ. ಮೇಲ್ಮನವಿಯ ಪುನರ್ ವಿಚಾರಣೆಗೆ ಮತ್ತು ಕಾನೂನು ಪ್ರಕಾರ ಹೊಸದಾಗಿ ಇತ್ಯರ್ಥ ಪಡಿಸಲು ಉಚ್ಚ ನ್ಯಾಯಾಲಯಕ್ಕೆ ವಾಪಸ್ಸು ಮಾಡಿದೆ. -1963ರ ಕಾನೂನುಪರಿಮಿತಿ ಕಾಯಿದೆ -ಅನುಸೂಚಿಯ ಆರ್ಟಿಕಲ್ 54.

ಪದಗಳು ಮತ್ತು ಅಭಿವ್ಯಕ್ತಿಗಳು-'ಮೆಲ್ಮನವಿ'-ಅರ್ಥ- ನಿರ್ಣಯ – ಶಬ್ದ 'ಮೇಲ್ಮನವಿ' ಇದನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯಲ್ಲಿ ವ್ಯಾಖ್ಯಾನಿಸಲಾಗಿಲ್ಲ-ಅಧೀನ ನ್ಯಾಯಾಲಯದ ತೀರ್ಪಿನ ಬಗ್ಗೆ ಮೇಲಿನ ನ್ಯಾಯಾಲಯ ನ್ಯಾಯಿಕವಾಗಿ ಪರಿಶೀಲಿಸಿ ತೀರ್ಪಿನಲ್ಲಿ ಇರಬಹುದಾದ ಸಂಭವನೀಯ ದೋಷವನ್ನು ಸರಿಪಡಿಸಬಹುದಾಗಿರುತ್ತದೆ.

ಮೇಲ್ಮನವಿಯನ್ನು ಭಾಗಶಃ ಅನುಮತಿಸಿದ ನ್ಯಾಯಾಲಯವು, ಕೆಳಕಂಡಂತೆ ಹೇಳಿದೆ:

1.1 ಸಿಪಿಸಿಯ 96ನೇ ಪ್ರಕರಣವು, ಮೂಲ ನ್ಯಾಯವ್ಯಾಪ್ತಿಯನ್ನು ಚಲಾಯಿಸುವ ಯಾವುದೇ ನ್ಯಾಯಾಲಯಗಳು ನೀಡಿದ ತೀರ್ಪಿನ ವಿರುದ್ಧ ಮೇಲ್ಮನವಿಗಳನ್ನು ಸಲ್ಲಿಸಲು ಅವಕಾಶ ನೀಡುತ್ತದೆ. ಪ್ರಸಕ್ತ ಪ್ರಕರಣದಲ್ಲಿ, ವಿಚಾರಣೆ ನ್ಯಾಯಾಲಯವು ನೀಡಿದ ತೀರ್ಪಿನ ವಿರುದ್ಧ ಮೇಲ್ಮನವಿಯು ಉಚ್ಚ ನ್ಯಾಯಾಲಯಕ್ಕೆ ಇರುತ್ತದೆ. 'ಮೇಲ್ಮನವಿ' ಎಂಬ ಪದವನ್ನು ಸಿ.ಪಿ.ಸಿಯಲ್ಲಿ ವ್ಯಾಖ್ಯಾನಿಸಲಾಗಿಲ್ಲ. ಉನ್ನತ ನ್ಯಾಯಾಲಯ ಅಧೀನ ನ್ಯಾಯಾಲಯದ ತೀರ್ಪಿನ ನ್ಯಾಯಿಕ ಪರೀಕ್ಷೆ ಮಾಡಿ ಅಂತಹ ತೀರ್ಪಿನಲ್ಲಿ ಇರಬಹುದಾದ ಯಾವುದೇ ಸಂಭವನೀಯ ದೋಷಗಳನ್ನು ಸರಿಪಡಿಸುವುದಾಗಿರುತ್ತದೆ. .ಮೇಲ್ಮನವಿಯು ಮೂಲ ನ್ಯಾಯಾಲಯದ ವ್ಯವಹರಣೆಯ ಮುಂದುವರಿಕೆಯಾಗಿದೆ. ಸಾಮಾನ್ಯವಾಗಿ, ಮೇಲ್ಮನವಿ ನ್ಯಾಯವ್ಯಾಪ್ತಿಯು ಕಾನೂನು ಮತ್ತು ವಾಸ್ತವಾಂಶಗಳ

ಮರು-ವಿಚಾರಣೆಯನ್ನು ಒಳಗೊಂಡಿರುತ್ತದೆ ಮತ್ತು ಇದನ್ನು ಬಾಧಿತ ವ್ಯಕ್ತಿ ಆಹ್ವಾನಿಸುತ್ತಾನೆ.ಮೊದಲ ಮೇಲ್ಮನವಿಯು ಅಪೀಲುದಾರನ ಅಮೂಲ್ಯವಾದ ಹಕ್ಕಾಗಿದೆ ಮತ್ತು ಅದರಲ್ಲಿ ವಿಚಾರಣೆ ನ್ಯಾಯಾಲಯವು ನಿರ್ಧರಿಸಿದ ವಿಷಯಕ್ಕೆ ಸಂಭಂದಿಸಿದ ಮತ್ತು ಕಾನೂನಿಗೆ ಸಂಬಂದಿಸಿದ ಎಲ್ಲಾ ಪ್ರಶ್ನೆಗಳೂ ಪುನರ್-ಪರಿಶೀಲನಗೆ ಒಳಪಡುತ್ತದೆ. ಮೊದಲ ಮೇಲ್ಮನವಿ ನ್ಯಾಯಾಲಯದ ತೀರ್ಪು ಮನಃಪೂರ್ವಕ ಹಾಗೂ ಪ್ರಜ್ಞಾಪೂರ್ವಕ ಅನ್ವಯವನ್ನು ತೋರಿಸಬೇಕು ಮತ್ತು ಎಲ್ಲಾ ವಿವಾದಂಶಗಳು ಮತ್ತು ವಾದಗಳ ಬಗ್ಗೆ ನಿರ್ಣಯ ಹಾಗೂ ಅಂತಹ ನಿರ್ಣಯಕ್ಕೆ ಕಾರಣಗಳನ್ನು ದಾಖಲಿಸಬೇಕು. ಸಿಪಿಸಿಯ ಕಲಂ96ರ ಅಡಿಯಲ್ಲಿ ಸಲ್ಲಿಸುವ ಮೊದಲ ಮೇಲ್ಮನವಿಯು ಕಲಂ 100ರ ಅಡಿಯಲ್ಲಿ ಎರಡನೇ ಮೇಲ್ಮನವಿಗಿಂತ ಸಂಪೂರ್ಣವಾಗಿ ಭಿನ್ನವಾಗಿದೆ. **2**ನೇ ಮೇಲ್ಮನವಿ ಪ್ರಕರಣದಲ್ಲಿ ಕಾನೂನಿನ ಪ್ರಶ್ನೆ ಒಳಗೊಂಡಿದ್ದರೆ ಮತ್ತು ಹಾಗೆ ಒಳಗೊಂಡಿರುವ ಕಾನೂನಿನ ಪ್ರಶ್ನೆ ಗಣನೀಯ ಸ್ವರೂಪದಲ್ಲಿರದಿದ್ದರೆ, ಕಲಂ 100 ಎರಡನೇ ಮೇಲ್ಮನವಿಯನ್ನು ಸ್ಪಷ್ಟವಾಗಿ ನಿಷೇಧಿಸುತ್ತದೆ. [ಪ್ಯಾರಾಗಳು 11,14 ಮತ್ತು 15] [793-ಜಿ-ಎಚ್; 794-ಎ-ಬಿ, ಎಫ್-ಎಚ್; 795-ಎ-ಸಿ]

1.2 ಮೊದಲ ಮೇಲ್ಮನವಿ ನ್ಯಾಯಾಲಯ ತೀರ್ಪು ನಿರ್ಣಯಕ್ಕಾಗಿ ಅಂಶಗಳನ್ನು ನಿಗದಿಪಡಿಸಬೇಕು, ಆ ಅಂಶಗಳ ಮೇಲೆ ನಿರ್ಣಯ ಹಾಗೂ ಕಾರಣಗಳನ್ನು ನೀಡಬೇಕು.ಮೊದಲ ಮೇಲ್ಮನವಿ ನ್ಯಾಯಾಲಯವು ವಿಚಾರಣೆ ನ್ಯಾಯಾಲಯದ ತೀರ್ಪನ್ನು ದೃಢೀಕರಿಸಿದರೂ ಸಹ, ಆದೇಶ XLI ನಿಯಮ 31ರ ಅವಶ್ಯಕತೆಗಳನ್ನು ಪಾಲಿಸಬೇಕಾಗುತ್ತದೆ ಮತ್ತು ಈ ಅವಶ್ಯಕತೆಯನ್ನು ಪಾಲಿಸದಿರುವುದು ಮೊದಲ ಮೇಲ್ಮನವಿ ನ್ಯಾಯಾಲಯದ ತೀರ್ಪಿನಲ್ಲಿ ಲೋಪ ಉಂಟಾಗಲು ಕಾರಣವಾಗುತ್ತದೆ. ಒಪ್ಪಂದದ ತನ್ನ ಭಾಗವನ್ನು ನಿರ್ವಹಿಸಲು ವಾದಿ ಸಿದ್ಧನಿದ್ದಾನೆ ಹಾಗೂ ತಯಾರಾಗಿದ್ದಾನೆ ಹಾಗೂ ಕಾಲ ಪರಮಿತಿಯ ವಿವದಾಂಶಗಳನ್ನು ವಾದಿಗೆ ವಿರುದ್ಧವಾಗಿ ಉತ್ತರಿಸಿ ದಾವೆಯನ್ನು ವಜಾಗೊಳಿಸಲಾಯಿತು.ಉಚ್ಚ ನ್ಯಾಯಾಲಯದ ಮುಂದೆ ಸಲ್ಲಿಸಲಾಗಿದ್ದ ಮೇಲ್ಮನವಿಯು ಕಾನೂನು ಮತ್ತು ವಾಸ್ತವಾಂಶಗಳೆರಡರ ವಿವಾದಿತ ಪ್ರಶ್ನೆಗಳನ್ನು ಒಳಗೊಂಡಿತ್ತು.ಈ ಯಾವುದೇ ಅಂಶಗಳನ್ನು ಪರಿಶೀಲಿಸದೆ ಉಚ್ಚ ನ್ಯಾಯಾಲಯವು ಸಂಕ್ಷಿಪ್ತ ಆದೇಶದ ಮೂಲಕ ಮೇಲ್ಮನವಿಯನ್ನು ವಜಾಗೊಳಿಸಿತು.ಉಚ್ಚನ್ಯಾಯಾಲಯವು ಪಕ್ಷಗಳ ಪುರಾವೆ ಮರುಪರಿಶೀಲಿಸಲಿಲ್ಲ, ಅಥವಾ ತರ್ಕಬದ್ಧವಾದ ಆದೇಶ ಹೊರಡಿಸಲಿಲ್ಲ.ಮೇಲ್ಮನವಿಯನ್ನು ನಿರ್ಧರಿಸುವಾಗ ಉಚ್ಚ ನ್ಯಾಯಾಲಯವು ಸಿಪಿಸಿಯ

ಆದೇಶ ೪೧ ನಿಯಮ 31ರ ನಿಬಂಧನೆಗಳನ್ನು ಅನುಸರಿಸುವಲ್ಲಿ ವಿಫಲವಾಗಿದೆ. ಆದ್ದರಿಂದ ಉಚ್ಚ ನ್ಯಾಯಾಲಯದ ಐತೀರ್ಪು(ಡಿಕ್ರೀ) ಮತ್ತು ಆದೇಶವನ್ನು ರದ್ದುಪಡಿಸಲಾಗಿದೆ ಮತ್ತು ಕಾನೂನಿನ ಪ್ರಕಾರ ಈ ವಿಷಯವನ್ನು ಹೊಸದಾಗಿ ಇತ್ಯರ್ಥಪಡಿಸಲು ಉಚ್ಚ ನ್ಯಾಯಾಲಯಕ್ಕೆ ಕಳುಹಿಸಲಾಗಿದೆ [ಪ್ಯಾರಾಗಳು 19-21] [797-B-G]

ಹರಿ ಶಂಕರ್ ವಿರುದ್ದ ರಾವ್ ಗಿರ್ಧಾರಿ ಲಾಲ್ ಚೌಧರಿ ಎಐಆರ್ 1963 ಎಸ್.ಸಿ 698:[1962] ಪೂರಕ.ಎಸ್. ಸಿ. ಆರ್. 933; ಶಂಕರ್ ರಾಮಚಂದ್ರ ಅಭ್ಯಂಕರ್ ವಿರುದ್ದ ಕೃಷ್ಣಾಜಿ ದತ್ತಾತ್ರೇಯ ಬಾಪಟ್ (1969) 2 ಎಸ್. ಸಿ. ಸಿ. 74:[1970] 1 ಎಸ್. ಸಿ.ಆರ್ 322; ವಿನೋದ್ ಕುಮಾರ್ ವರ್ಸಸ್ ಗಂಗಾಧರ್ (2015) 1 ಎಸ್.ಸಿ.ಸಿ. 391:[2014] 10 ಎಸ್. ಸಿ.ಆರ್ 1050; ಶಶಿಧರ್ ಮತ್ತು ಇತರರು . ವಿರುದ್ದ .ಅಶ್ವನಿ ಉಮಾ ಮಠದ್ ಮತ್ತು ಇನ್ನೊಬ್ಬರು (2015) 11 ಎಸ್.ಸಿ.ಸಿ 269: [2015] 2 ಎಸ್.ಸಿ.ಆರ್ 1 ಅನ್ನು ಅವಲಂಬಿಸಲಾಗಿದೆ.

ಸಂತೋಷ್ ಹಜಾರಿ ವರ್ಸಸ್ ಪುರುಷೋತ್ತಮ್ ತಿವಾರಿ (ಮೃತ ಇವರ ಉತ್ತರಾಧಿಕಾರಿಗಳು ಪ್ರತಿನಿದಿಯಾಗಿದ್ದಾರೆ)) (2001) 3 ಎಸ್. ಸಿ. ಸಿ. 179: [2001] 1 ಎಸ್ಸಿಆರ್ 948; ಮಧುಕರ್ ಮತ್ತು ಇತರರು ವಿರುದ್ದ ಸಂಗ್ರಾಮ್ ಮತ್ತು ಇತರರು (2001) 4 ಎಸ್.ಸಿ.ಸಿ. 756: [2001] 3 ಎಸ್. ಸಿ. ಆರ್ 138; ಬಿ. ಎಂ. ನಾರಾಯಣ ಗೌಡ ವಿರುದ್ದ ಶಾಂತಮ್ಮ (ಮೃತ ಇವರ ಉತ್ತರಾಧಿಕಾರಿಗಳು ಪ್ರತಿನಿದಿಯಾಗಿದ್ದಾರೆ) ಮತ್ತು ಇನ್ನೊಬ್ಬರು ; (2011) 15 ಎಸ್. ಸಿ. ಸಿ 476; ಎಚ್. ಕೆ. ಎನ್. ಸ್ವಾಮಿ ವಿರುದ್ದ ಇರ್ಷಾದ್ ಬಾಸಿತ್ (ಮೃತ-ಇವರ,ವುತ್ತರಾಧಿಕಾರಿಗಳು) (2005) 10 ಎಸ್. ಸಿ. ಸಿ 243; ಮೆಸರ್ಸ್ ಶ್ರೀ ರಾಜಾ ಲಕ್ಷ್ಮಿ ಡೈಯಿಂಗ್

ವರ್ಕ್ಸ್ ವಿರುದ್ದ ರಂಗಸ್ವಾಮಿ ಚೆಟ್ಟಿಯಾರ್ (1980) 4 ಎಸ್. ಸಿ. ಸಿ 259-ಇವನ್ನು ಉಲ್ಲೇಖಿಸಲಾಗಿದೆ.

ಬ್ಲ್ಯಾಕ್ಸ್ ಲಾ ಡಿಕ್ಷನರಿ (7ನೇ ಆವೃತ್ತಿ)-ಉಲ್ಲೇಖಿಸಲಾಗಿದೆ.

ಪ್ರಕರಣ ಕಾನೂನು ಉಲ್ಲೇಖ

[1962] ಪೂರಕ.ಎಸ್ಸಿಆರ್ 933 ಪ್ಯಾರ 12ನ್ನು ಉಲ್ಲೇಕಿಸಿದೆ

[1970] 1 ಎಸ್ಸಿಆರ್ 322 ಪ್ಯಾರ 13ನ್ನು ಉಲ್ಲೇಕಿಸಿದೆ

[2001] ಎಸ್.ಸಿ.ಆರ್ 948 ಪ್ಯಾರಾ 14ನ್ನು ಉಲ್ಲೇಕಿಸಿದೆ

[2001]ಎಸ್.ಸಿ.ಆರ್.3 138 ಪ್ಯಾರಾ 14ಕ್ಕೆ ಉಲ್ಲೇಕಿಸಿದೆ

(2011) 15 ಎಸ್.ಸಿ.ಸಿ.476 ಪ್ಯಾರಾ 14 ಉಲ್ಲೇಕಿಸಿದೆ

(2005) 10 ಎಸ್. ಸಿ. ಸಿ. 243 ಪ್ಯಾರಾ 14ಕ್ಕೆ ಉಲ್ಲೇಖಿಸಿದೆ

(1980) 4 ಎಸ್. ಸಿ. ಸಿ. 259 ಪ್ಯಾರಾ 14ನ್ನು ಉಲ್ಲೇಕಿಸಿದೆ

[2014] 10 ಎಸ್ಸಿಆರ್ 1050 ಪ್ಯಾರ 17ನ್ನು ಉಲ್ಲೇಕಿಸಿದೆ

[2015] 2 ಎಸ್. ಸಿ. ಆರ್ 1 ಪ್ಯಾರ 18ನ್ನು ಉಲ್ಲೇಕಿಸಿದೆ.

ಸಿವಿಲ್ ಮೇಲ್ಮನವಿಯ ಅಧಿಕಾರ ವ್ಯಾಪ್ತಿ : 2020ರ ಸಿವಿಲ್ ಮೇಲ್ಮನವಿ ಸಂಖ್ಯೆ 1485/2020.

ಆರ್.ಎಫ್.ಎ 1731/2006ರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ ನೀಡಿದ ತೀರ್ಪು ಹಾಗೂ ಐತೀರ್ಪಿನ ವಿರುದ್ದ ನೀಡಿರುವ ತೀರ್ಪು ಮತ್ತು ಆದೇಶದಿಂದ.

ಎಸ್. ಎನ್. ಭಟ್, ಮೇಲ್ಮನವಿದಾರರ ಪರ ವಕೀಲರು.

ನ್ಯಾಯಾಲಯದ ತೀರ್ಪನ್ನು ನೀಡಿದವರು

ಎಸ್. ಅಬ್ದುಲ್ ನಜೀರ್, ಜೆ.

1. ವಿಳಂಬವನ್ನು ಮನ್ನಿಸಲಾಗಿದೆ . ಮೇಲ್ಮನವಿ ಸಲ್ಲಿಸಲು ಅನುಮತಿಸಿದೆ.

2. ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇವರು, ಆರ್.ಎಫ್.ಎ 1631-2006ರಲ್ಲಿ ದಿನಾಂಕ 9.2.2012ರಲ್ಲಿ ತೀರ್ಪು ನೀಡಿದ್ದು, ಇದರಲ್ಲಿ ಓ.ಎಸ್.32/2005 ರಲ್ಲಿ ವಿಚಾರಣಾ ನ್ಯಾಯಾಲಯದವರು ನೀಡಿದ ತೀರ್ಪು ಹಾಗೂ ಐತೀರ್ಪನ್ನು ಅನುಮೋದಿಸಿರುತಾರೆ.

3. ವಾದಿಯು ಮೇಲ್ಕಂಡ ದಾವೆಯನ್ನು ಪ್ರತಿವಾದಿಗಳ ವಿರುದ್ದ ಸಲ್ಲಿಸಿ 30.3.2000ದಂದು ಪ್ರತಿವಾದಿಗಳು ಬರೆದುಕೊಟ್ಟ ಕ್ರಯ ಒಪ್ಪಂದದ ಪತ್ರವನ್ನು ಪಾಲಿಸಬೇಕೆಂದು ದಾವಾ ಹೂಡಿದ್ದು, ಕರಾರು ಪ್ರಕಾರ, ಕರಾರುಪತ್ರ ಆದ 3 ವರ್ಷಗಳ ಒಳಗೆ ಪ್ರತಿವಾದಿಗಳು ತಮ್ಮ ಜವಾಬ್ದಾರಿಗಳನ್ನು ಪೂರೈಸಿದ ನಂತರ ಕ್ರಯಪತ್ರವಾಗಬೇಕಿತ್ತು

4. 1ನೇ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದಾರೆ ಮತ್ತು ಇತರ ಪ್ರತಿವಾದಿಗಳು ಮೆಮೊ ಸಲ್ಲಿಸಿ ಆ ಪ್ರತಿವಾದ ಪತ್ರವೇ ತಮ್ಮ ಪ್ರತಿವಾದ ಪತ್ರ ಎಂದು ಅಳವಡಿಸಿಕೊಂಡಿರುತ್ತಾರೆ. ೧ನೇ ಪ್ರತಿವಾದಿಯು ವಾದಿ ಪರ ಕ್ರಯ ಒಪ್ಪಂದ ಪತ್ರವನ್ನು ಬರೆದುಕೊಟ್ಟಿದನ್ನು ಒಪ್ಪಿಕೊಂಡಿರುತ್ತಾರೆ ಆದಾಗ್ಯೂ, ದಾವಾ ಕಾಲಪರಿಮಿತಿ ಮೀರಿರುವುದರಿಂದ ನಡೆಯುವಂತಿಲ್ಲವೆಂದು ಹಾಗೂ ವಾದಿ ಕ್ರಯ ಒಪ್ಪಂದದ ತನ್ನ ಭಾಗದ ಕರಾರನ್ನು ನಿರ್ವಹಿಸಲು ತಯಾರಿರಲ್ಲ ಮತ್ತು ಸಿದ್ಧರಿರಲ್ಲ ಎಂದು ವಾದಿಸಿರುತ್ತಾರೆ.

5. ಪಕ್ಷಗಾರರು ಸಲ್ಲಿಸಿದ ವಾದ, ಪ್ರತಿವಾದ ಪತ್ರಗಳ ಮೇಲಿನಿಂದ ವಿಚಾರಣ ನ್ಯಾಯಾಲಯವು ಈ ಕೆಳಗಿನ ವಿವಾದಂಶಗಳನ್ನು **ರೂಪಿಸಿತುಃ-**

"1 ಮತ್ತು 2 ನೇ ಪ್ರತಿವಾದಿಗಳು ಮತ್ತು ಅವರ ತಂದೆ 30.3.2000 ರಂದು 2 ಲಕ್ಷ ರೂಪಾಯಿಗಳಿಗೆ ಕ್ರಯ ಒಪ್ಪಂದದ ಕರಾರು ಪತ್ರವನ್ನು ವಾದಿಯ ಹೆಸರಿಗೆ ಬರೆದುಕೊಟ್ಟಿದ್ದಾರೆಂದು ಹಾಗೂ ಮುಂಗಡ ಹಣ 1,50,000/- ರೂಗಳನ್ನು ಪಡೆದುಕೊಂಡಿದ್ದರೆಂದು ವಾದಿ ಸಾಬೀತುಪಡಿಸುತ್ತಾರೆಯೇ?

2. ವಾದಿ ಒಪ್ಪಂದದ ತನ್ನ ಭಾಗವನ್ನು ನಿರ್ವಹಿಸಲು ಯಾವಾಗಲೂ ತಯ್ಯಾರಾಗಿದ್ದಾರು ಮತ್ತು ಸಿದ್ಧನಾಗದ್ದಾರು ಎಂದು ಸಾಬೀತುಪಡಿಸುತ್ತಾರೆಯೇ?

3. ದಾವಾ ಕಾಲಪರಿಮಿತಿಯಿಂದ ಭಾದಿತವಾಗಿದೆಯೇ??

4. ಯಾವ ಆದೇಶ ಅಥವಾ ತೀರ್ಪು?

6. ವಾದಿ ತನ್ನನ್ನೇ ವಾದಿ ಪರ 1ನೇ ಸಾಕ್ಷಿ ಎಂಬುದಾಗಿ ವಿಚಾರಣೆ ಮಾಡಿಕೊಂಡಿದ್ದು ನಿಶಾನೆ ಪಿ-1, ಪಿ1 (ಎ) ನಿಂದ (ಸಿ) ಇವುಗಳನ್ನು ಗುರುತಿಸಿದ್ದಾರೆ. 1ನೇ ಪ್ರತಿವಾದಿ ತನ್ನನ್ನು ಪ್ರತಿವಾದಿ ಪರ 1ನೇ ಸಾಕ್ಷಿ ಎಂದು ವಿಚಾರಣೆ ಮಾಡಿಕೊಂಡು 3 ಸಾಕ್ಷಿಗಳನ್ನು ಪ್ರತಿವಾದಿ ಪರ 2 ರಿಂದ 4 ನೇ ಸಾಕ್ಷಿ ಗಳಾಗಿ ವಿಚಾರಣೆ ಮಾಡಿರುತಾರೆ.ಸಾಕ್ಷ್ಯವನ್ನು ಪರಿಶೀಲಿಸಿದ ನಂತರ ದಾವೆಗೆ ಕಾಲ ಪರಿಮಿತಿ ಭಾದಕ ಇದೆ ಹಾಗೂ ವಾದಿ ತನ್ನ ಪಾಲಿನ ಕರಾರಿನ ಜವಾಬ್ದಾರಿ ನಿರ್ವಹಿಸಲು ತಯಾರಿರಲಿಲ್ಲ ಹಾಗೂ ಸಿದ್ದನಿರಲಿಲ್ಲ ಎಂಬ ನಿರ್ಣಯ ನೀಡಿ ದಾವೆಯನ್ನು ವಜಾ ಮಾಡಲಾಗಿದೆ.

7. ಮೇಲೆ ಗಮನಿಸಿದಂತೆ, ಉಚ್ಚ ನ್ಯಾಯಾಲಯವು ವಿಚಾರಣೆ ನ್ಯಾಯಾಲಯದ ತೀರ್ಪನ್ನು ಹಾಗೂ ಐತೀರ್ಪುವನ್ನು ದೃಢಪಡಿಸಿದೆ.

8. ಮೇಲ್ಮನವಿದಾರ/ವಾದಿ ಪರ ವಕೀಲಾದ ಶ್ರೀ ಎಸ್. ಎನ್. ಭಟ್ ಅವರ ವಾದವನ್ನು ಆಲಿಸಲಾಯಿತು. ಪ್ರತಿವಾದಿಗಳಿಗೆ ನೋಟಿಸ್ ನೀಡಲಾಗಿದ್ದರೂ, ಅವರ ಪರವಾಗಿ ಯಾರೂ ಕಾಣಿಸಿಕೊಂಡಿಲ್ಲ.

9. ಗಣ್ಯ ವಕೀಲಾದ ಶ್ರೀ ಭಟ್ ಅವರು ಎರಡು ರೀತಿಯ ವಾದಗಳನ್ನು ಮಂಡಿಸಿದ್ದಾರೆ.ಮೊದಲನೆಯದಾಗಿ, ದಾಖಲೆಯಲ್ಲಿರುವ ಪುರಾವೆ ಮರುಪರಿಶೀಲಿಸದೆ ಉಚ್ಚ ನ್ಯಾಯಾಲಯವು ಸಂಕ್ಷಿಪ್ತ ತೀರ್ಪನ್ನು ನೀಡಿದೆ ಎಂದು ಅವರು ವಾದಿಸಿದ್ದಾರೆ .ಸಿವಿಲ್ ಪ್ರಕ್ರಿಯ ಸಂಹಿತೆ, 1908 (ಸಂಕ್ಷಿಪ್ತವಾಗಿ 'ಸಿಪಿಸಿ') ಯ ಕಲಂ 96ರ ಅಡಿಯಲ್ಲಿ ವಾದಿ ಸಲ್ಲಿಸಿದ ಮೊದಲ ಮೇಲ್ಮನವಿಯು ದಾವೆಯ ಮುಂದುವರಿಕೆಯಾಗಿದೆ ಮತ್ತು ಕಡತದಲ್ಲಿರುವ ಸಂಪೂರ್ಣ ಪುರಾವೆಯನ್ನು ಉಚ್ಚ ನ್ಯಾಯಾಲಯವು ಮರು ಪರಿಶೀಲನೆ ಮಾಡಬೇಕಿರುತ್ತದೆ ಎಂದು ವಾದಿಸಿದ್ದಾರೆ. ಉಚ್ಚ ನ್ಯಾಯಾಲಯವು ಒಂದು ಮೇಲ್ಮನವಿ ನ್ಯಾಯಾಲಯವಾಗಿ ಮೇಲ್ಮನವಿಯನ್ನು ನಿರ್ಧರಿಸುವಾಗ ಸಿಪಿಸಿಯ ಆದೇಶ XLI ನಿಯಮ 31ರ ಅಡಿಯಲ್ಲಿ ಒದಗಿಸಲಾದ ಮಾರ್ಗಸೂಚಿಗಳನ್ನು ಅನುಸರಿಸಲು ವಿಫಲವಾಗಿದೆ ಎಂದು ವಾದಿಸಲಾಯಿತು.ಎರಡನೆಯದಾಗಿ, ಮಾರಾಟದ ಒಪ್ಪಂದವು 30.03.2000ನೇ ದಿನಾಂಕವನ್ನು ಹೊಂದಿದೆ, ಇದು ಮಾರಾಟ ಪತ್ರ ಕಾರ್ಯಗತಗೊಳಿಸುವಿಕೆಯನ್ನು ಪೂರ್ಣಗೊಳಿಸಲು ಒಪ್ಪಂದದ ದಿನಾಂಕದಿಂದ ಮೂರು ವರ್ಷಗಳ ಸಮಯವನ್ನು ಒದಗಿಸುತ್ತದೆ. 28.01.2005 ನಲ್ಲಿ ದಾವೆಯನ್ನು ಹೂಡಲಾಗಿದ್ದು , ಅದು ಕಾಲಪರಿಮಿತಿಯೊಳಗೆ ಇದೆ. 1963ರ ಕಾಲಪರಿಮಿತಿ ಕಾಯ್ದೆಯ((ಸಂಕ್ಷಿಪ್ತವಾಗಿ 'ಕಾಲಪರಿಮಿತಿ ಕಾಯಿದೆ'), ಪರಿಶ್ಛೇದದ ವಿಧಿ(article) 54ರ ಪ್ರಕಾರ ಒಪ್ಪಂದದ ಅನುಷ್ಠಾನಕ್ಕೆ ದಿನಾಂಕವನ್ನು ನಿಗದಿಪಡಿಸಿದಾಗ, ದಾವೆಯನ್ನು ಸಲ್ಲಿಸಲು ಕಾಲ

ಪರಿಮಿತಿಯ ಅವಧಿಯು ನಿಗದಿತ ದಿನಾಂಕದಿಂದ ಮೂರು ವರ್ಷಗಳು ಎಂದು ಇರುತ್ತದೆ. ಒಪ್ಪಂದದ ತನ್ನ ಭಾಗವನ್ನು ನಿರ್ವಹಿಸಲು ವಾದಿ ಸಿದ್ಧನಿದ್ದನೋ ಹಾಗೂ ತಯಾರಿದ್ದನೋ ಎಂಬ ಬಗ್ಗೆ ಉಚ್ಚ ನ್ಯಾಯಾಲಯವು ಯಾವುದೇ ನಿರ್ಣಯ ನೀಡಿಲ್ಲ ಎಂದು ವಾದಿಸಲಾಯಿತು.

10. ಗಣ್ಯ ವಕೀಲರ ವಾದವನ್ನು ಎಚ್ಚರಿಕೆಯಿಂದ ಪರಿಗಣಿಸಿದ್ದೇವೆ ಮತ್ತು ಕಡತದಲ್ಲಿರುವ ಸಾಕ್ಷ್ಯವನ್ನು ಪರಿಶೀಲಿಸಿದ್ದೇವೆ.

11. ಸಿಪಿಸಿಯ ಕಲಂ 96, ಮೂಲ ನ್ಯಾಯವ್ಯಾಪ್ತಿಯನ್ನು ಚಲಾಯಿಸುವ ಯಾವುದೇ ನ್ಯಾಯಾಲಯದ ಐತೀರ್ಪಿನ ವಿರುದ್ಧ ಮೇಲ್ಮನವಿಯನ್ನು ಆಲಿಸಲು ಅಧಿಕಾರ ಹೊಂದಿರುವ ನ್ಯಾಯಾಲಯದಲ್ಲಿ ಐತೀರ್ಪಿನ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಲು ಅವಕಾಶ ನೀಡುತ್ತದೆ. ಪ್ರಸಕ್ತ ಪ್ರಕರಣದಲ್ಲಿ, ವಿಚಾರಣೆ ನ್ಯಾಯಾಲಯವು ನೀಡಿದ ಐತೀರ್ಪು ವಿರುದ್ಧ ಮೇಲ್ಮನವಿಯು ಉಚ್ಚ ನ್ಯಾಯಾಲಯಕ್ಕೆ ಬರುತ್ತದೆ. 'ಮೇಲ್ಮನವಿ' ಎಂಬ ಪದವನ್ನು ಸಿಪಿಸಿಯಲ್ಲಿ ವ್ಯಾಖ್ಯಾನಿಸಲಾಗಿಲ್ಲ. ಬ್ಲಾಕ್ಸ್ ಲಾ ನಿಘಂಟಿನಲ್ಲಿ (7ನೇ ಮುದ್ರಣ) "ತೀರ್ಮಾನದ ಪರಿಶೀಲನೆಗೆ ಉನ್ನತ ಪ್ರಾಧಿಕಾರಕ್ಕೆ ತರುವ ನಡುವಳಿಕೆ ಕ್ರಮ" ಎಂದು ವ್ಯಾಖ್ಯಾನಿಸಲಾಗಿದೆ. ಮೇಲ್ಮನವಿ ಎಂದರೆ ಉನ್ನತ ನ್ಯಾಯಾಲಯ ಅಧೀನ ನ್ಯಾಯಾಲಯದ ತೀರ್ಪಿನ ನ್ಯಾಯಿಕ ಪರೀಕ್ಷೆಮಾಡಿ ಲೋಪಗಳಿದ್ದರೆ ಅವನ್ನು ಪರಿಶೀಲಿಸಿ ಸರಿಪಡಿಸುವುದು ಎಂದಾಗುತ್ತದೆ. ಮೇಲ್ಮನವಿಯ ಅವಕಾಶವನ್ನು ನೀಡಿರುವುದು ನ್ಯಾಯಾಂಗ ಶ್ರೇಣಿಯ ಅಧಿಕಾರಿಗಳು ಸಹ ತಪ್ಪು ಮಾಡುವ ಸಾಧ್ಯತೆ ಇರುತ್ತದೆ ಎಂಬ ಕಾರಣಕ್ಕೆ).

12. **ಹರಿ ಶಂಕರ್ ವಿರುದ್ಧ ರಾವ್ ಗಿರ್ಧಾರಿ ಲಾಲ್ ಚೌಧರಿ(1)**ಮೇಲ್ಮನವಿಯ ಹಕ್ಕಿನೊಂದಿಗೆ ಕಾನೂನಿಗೆ ಸಂಬಂದಿಸಿದ ಪ್ರಶ್ನೆ ಹಾಗೂ ವಿಷಯಕ್ಕೆ ಸಂಬಂದಿಸಿದ ಪ್ರಶ್ನೆ ಇವುಗಳ ಬಗ್ಗೆ ಪುನಹ ವಾದ, ವಿವಾದಗಳನ್ನು ಕೇಳಬಹುದಾಗಿರುತ್ತದೆ. ಆದರೆ 2ನೇ ಮೇಲ್ಮನವಿಗೆ ತಿಳಿಸಿದ ರೀತಿ ಯಾವುದೇ ಅಡೆತಡೆ ಕಾನೂನು ಅಡ್ಡಿ ಇಲ್ಲದಿದ್ದರೆ ಮಾತ್ರ.

1 = ಏಐಆರ್ 1963 ಎಸ್. ಸಿ. 698

13. ಶಂಕರ್ ರಾಮಚಂದ್ರ ಅಭ್ಯಂಕರ್ ವಿರುದ್ಧ ಕೃಷ್ಣಾಜಿ ದತ್ತಾತ್ರೇಯ ಬಾಪಟ್ (1969(2) ಎಸ್.ಸಿ.ಸಿ 74) ಈ ಪ್ರಕರಣದಲ್ಲಿ ಈ ರೀತಿ ಹೇಳಿದೆ.

"5. ..... ಸ್ಟೋರಿ ಆನ್ ಕಾನ್ಸ್ಟಟ್ಯೂಷನ್ (ಆಫ್ ಯುನೈಟೆಡ್ ಸ್ಟೇಟ್ಸ್) ಎಂಬ ಪ್ರಸಿದ್ಧ ಕೃತಿಯಲ್ಲಿ, ಸಂಪುಟ. 2, 1761ರ ಲೇಖನ, ಮೇಲ್ಮನವಿ ಅಧಿಕಾರವೆಂದರೆ ಅದು ಈಗಾಗಲೇ ನಡೆದಿರುವ ಕಾನೂನು ಪ್ರಕ್ರಿಯೆಯಲ್ಲಿ ಇರುವ ಲೋಪದೋಷಗಳನ್ನು ಸರಿಪಡಿಸುತ್ತದೆ ಮತ್ತು ಸಮಸ್ಯೆಯನ್ನು ಸೃಷ್ಟಿಸುವುದಿಲ್ಲ ಎಂದು ಹೇಳಲಾಗಿದೆ. ಮೇಲ್ಮನವಿ ನ್ಯಾಯವ್ಯಾಪ್ತಿಯನ್ನು ವಿವಿಧ ರೀತಿಯಲ್ಲಿ ಮತ್ತು ಶಾಸಕಾಂಗವು ನಿಗದಿಪಡಿಸಿದ ರೀತಿಯಲ್ಲಿ ಚಲಾಯಿಸಬಹುದು. ಆರ್ಟಿಕಲ್ 1762ರ ಪ್ರಕಾರ ಮೇಲ್ಮನವಿ ನ್ಯಾಯವ್ಯಾಪ್ತಿಯನ್ನು ಚಲಾಯಿಸುವ ಅತ್ಯಂತ ಸಾಮಾನ್ಯ ವಿಧಾನಗಳು ಎಂದರೆ ರಿಟ್ ಆಫ್ ಎರರ್ ಅಥವಾ ಮೇಲ್ಮನವಿ ಸಲ್ಲಿಸುವುದು ಅಥವಾ ದಾವೆಯನ್ನು ಕೆಳಹಂತಹದ ಟ್ರಿಬ್ಯೂನಲ್ನಿಂದ ತೆಗೆಸುವುದು, ಕೆಲವು ಪ್ರಕ್ರಿಯೆಗಳ ಮೂಲಕ, ಮೇಲ್ಮನವಿಯು ಸಿವಿಲ್ ಕಾನೂನು ಮೂಲದ ಪ್ರಕ್ರಿಯೆ ಆಗಿದೆ ಮತ್ತು, ಒಂದು ವ್ಯಾಜ್ಯವನ್ನು ತೆಗೆದುಹಾಕಬಹುದು, ವಿಷಯವನ್ನು ಕಾನೂನು ಪರಾಮರ್ಶೆಗೆ ಒಳಪಡಿಸಬಹುದು, ಪುನಾರ್ಪರಿಶೀಲನೆಗೆ ಅಥವಾ ಪುನರ್ ವಿಚಾರಾರಣೆಗೆ ಆದೇಶಿಸಬಹುದು".

14. ಮೇಲ್ಮನವಿಯು ಮೂಲ ನ್ಯಾಯಾಲಯದ ವಿಚಾರಣೆಯ ಮುಂದುವರಿಕೆಯಾಗಿದೆ ಎಂಬುದು ಕಾನೂನಿನ ಸ್ಥಿರವಾದ ನಿಲುವು.ಸಾಮಾನ್ಯವಾಗಿ, ಮೇಲ್ಮನವಿ ನ್ಯಾಯವ್ಯಾಪ್ತಿಯು ಕಾನೂನು ಮತ್ತು ವಾಸ್ತವಾಂಶಗಳ ಮರು-ವಿಚಾರಣೆಯನ್ನು ಒಳಗೊಂಡಿರುತ್ತದೆ ಮತ್ತು ಮೊದಲ ಮೇಲ್ಮನವಿಯು ಮೇಲ್ಮನವಿದಾರನ ಅಮೂಲ್ಯವಾದ ಹಕ್ಕಾಗಿದೆ ಮತ್ತು ಅದರಲ್ಲಿ ವಿಚಾರಣೆ ನ್ಯಾಯಾಲಯವು ನಿರ್ಧರಿಸಿದ ಕಾನೂನಿನ ಮತ್ತು ವಿಷಯದ ಎಲ್ಲಾ ಪ್ರಶ್ನೆಗಳು ಮರುಪರಿಶೀಲನೆಗೆ ಒಳಪಡುತ್ತವೆ. ಆದ್ದರಿಂದ, ಮೊದಲ ಮೇಲ್ಮನವಿ ನ್ಯಾಯಾಲಯ ಎಲ್ಲಾ ವಿವಾದಾಂಶಗಳಿಗೆ ಕಾರಣಗಳನ್ನು ನೀಡಿ ನಿರ್ಣಯ ನೀಡಬೇಕಾಗುತ್ತದೆ. ಮೊದಲ ಮೇಲ್ಮನವಿಯ ನ್ಯಾಯಾಲಯವು ಕಾನೂನಿನ ಎಲ್ಲಾ ಪ್ರಶ್ನೆಗಳು ಮತ್ತು ವಿಷಯದ ವಿವಾದಾಂಶಗಳ ಬಗ್ಗೆ ಪರಿಶೀಲಿಸಿ ನಂತರ ಮೌಖಿಕ ಮತ್ತು ಪುರಾವೆ ಸಾಕ್ಷ್ಯಗಳನ್ನು ಪರಿಶೀಲಿಸಿದ ನಂತರವೇ ತನ್ನ ತೀರ್ಮಾನವನ್ನು ದಾಖಲಿಸಬೇಕು.ಮೊದಲ ಮೇಲ್ಮನವಿ ನ್ಯಾಯಾಲಯ ಪ್ರಜ್ಞಾಪೂರ್ವಕವಾಗಿ ಎಲ್ಲಾ ವಿವಾದಾಂಶಗಳಿಗೆ ಮತ್ತು ಎಲ್ಲಾ ವಾದಗಳ ಬಗ್ಗೆ ನಿರ್ಣಯ ನೀಡಬೇಕು. [ಸಂತೋಷ್ ಹಜಾರಿ ವಿರುದ್ಧ ಪುರುಷೋತ್ತಮ್ ತಿವಾರಿ (ಮೃತ). ಉತ್ತರಾಧಿಕಾರಿಗಳಿಂದ) (2001)3 ಎಸ್.ಸಿ.ಸಿ.179: ಮಧುಕರ್ ಮತ್ತು ಇತರರು ವಿರುದ್ಧ

ಸಂಗ್ರಾಮ್ ಮತ್ತು ಇತರರು 4= (2001)4 ಎಸ್.ಸಿ.ಸಿ.756, ಬಿ. ಎಂ. ನಾರಾಯಣ ಗೌಡ ವಿರುದ್ಧ ಶಾಂತಮ್ಮ (ಮೃತ- ಉತ್ತರಾಧಿಕಾರಿಗಳಿಂದ)ಮತ್ತು ಇನ್ನೊಬ್ಬರು 5= (2011) 15 ಎಸ್.ಸಿ.ಸಿ.476 ಎಚ್. ಕೆ. ಎನ್. ಸ್ವಾಮಿ ವಿರುದ್ಧ ಇರ್ಷಾದ್ ಬಾಸಿತ್ (ಮೃತ- ಉತ್ತರಾಧಿಕಾರಿಗಳು) 6=(2005) 10 ಎಸ್.ಸಿ.ಸಿ.243, ಮೆಸ್ಸರ್ಸ್ ಶ್ರೀ ರಾಜಾ ಲಕ್ಷ್ಮಿ ಡೈಯಿಂಗ್ ವಿರುದ್ಧ ರಂಗಸ್ವಾಮಿ ಚೆಟ್ಟಿಯಾರ್ 7= (1980)4 ಎಸ್‌ಸಿಸಿ 259.

15. ಸಿಪಿಸಿಯ ಕಲಂ 96ರ ಅಡಿಯಲ್ಲಿ ಮೊದಲ ಮೇಲ್ಮನವಿಯು ಕಲಂ 100ರ ಅಡಿಯಲ್ಲಿನ ಎರಡನೇ ಮೇಲ್ಮನವಿಗಿಂತ ಸಂಪೂರ್ಣವಾಗಿ ಭಿನ್ನವಾಗಿದೆ.ಒಂದು ಪ್ರಕರಣದಲ್ಲಿ ಕಾನೂನಿನ ಪ್ರಶ್ನೆ ಒಳಗೊಂಡಿದ್ದರೆ ಮತ್ತು ಹಾಗೆ ಒಳಗೊಂಡಿರುವ ಕಾನೂನಿನ ಪ್ರಶ್ನೆ ಗಣನೀಯ ಸ್ವರೂಪದಲ್ಲಿರದಿದ್ದರೆ, ಕಲಂ 100 ಎರಡನೇ ಮೇಲ್ಮನವಿಯನ್ನು ಸ್ಪಷ್ಟವಾಗಿ ನಿಷೇಧಿಸುತ್ತದೆ.

16. ಸಿಪಿಸಿಯ ಆದೇಶ XLI ನಿಯಮ 31 ಈ ವಿಷಯದ ಬಗ್ಗೆ ಮೇಲ್ಮನವಿ ನ್ಯಾಯಾಲಯಕ್ಕೆ ತೀರ್ಪು ನೀಡುವುದಕ್ಕೆ ಮಾರ್ಗಸೂಚಿಗಳನ್ನು ಒದಗಿಸುತ್ತದೆ.ಸಿದ್ಧ ಉಲ್ಲೇಖಕ್ಕಾಗಿ ಸಿಪಿಸಿಯ ಆದೇಶ XLIನಿಯಮ 31 ಈ ಕೆಳಗಿನಂತಿದೆ:-

"31. ವಿಷಯ, ದಿನಾಂಕ ಮತ್ತು ತೀರ್ಪಿನ ಸಹಿ.-ಮೇಲ್ಮನವಿ ನ್ಯಾಯಾಲಯ ತೀರ್ಪು ಲಿಖಿತವಾಗಿರತಕ್ಕದ್ದು ಮತ್ತು ಇದರಲ್ಲಿ.

(ಎ) ನಿರ್ಣಯದ ಅಂಶಗಳು;

(ಬಿ) ಅದರ ಮೇಲೆ ನಿರ್ಧಾರ;

(ಸಿ) ನಿರ್ಧಾರಕ್ಕೆ ಕಾರಣಗಳು; ಮತ್ತು

(ಡಿ) ಮೇಲ್ಮನವಿ ಸಲ್ಲಿಸಲಾದ ಐತೀರ್ಪು ಹಿಂತಿರುಗಿಸಿದಲ್ಲಿ ಅಥವಾ ಬದಲಿಸಿದಲ್ಲಿ, ಮೇಲ್ಮನವಿದಾರ ಯಾವ ಪರಿಹಾರಕ್ಕೆ ಅರ್ಹನಾಗಿರುತ್ತಾನೆ;

ಮತ್ತು ಅದನ್ನು ಘೋಷಿಸುವ ಸಮಯದಲ್ಲಿ ನ್ಯಾಯಾಧೀಶರು ಅಥವಾ ಅದರಲ್ಲಿ ಸಮ್ಮತಿಸುವ ನ್ಯಾಯಾಧೀಶರುಗಳು ಸಹಿ ಮಾಡತಕ್ಕದ್ದು ಮತ್ತು ದಿನಾಂಕ ನಮೂದಿಸತಕ್ಕದ್ದು..

17. ವಿನೋದ್ ಕುಮಾರ್ ವಿರುದ್ಧ ಗಂಗಾಧರ್(8)(2015) 1 ಎಸ್.ಸಿ.ಸಿ.391 ಈ ಪ್ರಕರಣದಲ್ಲಿ ನ್ಯಾಯಾಲಯವು ಮೊದಲ ಮೇಲ್ಮನವಿಯನ್ನು ಇತ್ಯರ್ಥಪಡಿಸುವಾಗ ಮನಸ್ಸಿನಲ್ಲಿಟ್ಟುಕೊಳ್ಳಬೇಕಾದ ತತ್ವಗಳನ್ನು ಈ ಕೆಳಗಿನಂತೆ ಪುನರುಚ್ಚರಿಸಿದೆ:

"15. ಮತ್ತೆ ಬಿ. ವಿ. ನಾಗೇಶ್ ವಿರುದ್ಧ ಎಚ್. ವಿ. ಶ್ರೀನಿವಾಸ ಮೂರ್ತಿ [(2010) 13 ಎಸ್.ಸಿ.ಸಿ. 530:(2010) 4 ಎಸ್.ಸಿ.ಸಿ. 808], ಈ ನ್ಯಾಯಾಲಯವು ಈ ನ್ಯಾಯಾಲಯದ ಹಿಂದಿನ ಎಲ್ಲಾ ತೀರ್ಪುಗಳನ್ನು ಗಮನಿಸಿ, ಮೇಲೆ ತಿಳಿಸಲಾದ ತತ್ವವನ್ನು ಈ ಪದಗಳೊಂದಿಗೆ ಪುನರುಚ್ಚರಿಸಿದೆ: (ಎಸ್.ಸಿ.ಸಿ. ಪುಟ. 530-31, ಪ್ಯಾರ 3-5)

"3.ಮೇಲ್ಮನವಿ ನ್ಯಾಯಾಲಯ/ಉಚ್ಚ ನ್ಯಾಯಾಲಯವು ನಿಯಮಿತವಾದ ಮೊದಲ ಮೇಲ್ಮನವಿಯನ್ನು ಹೇಗೆ ವಿಲೇವಾರಿ ಮಾಡಬೇಕು ಎಂಬುದನ್ನು ಈ ನ್ಯಾಯಾಲಯವು ವಿವಿಧ ತೀರ್ಪುಗಳಲ್ಲಿ ಪರಿಗಣಿಸಿದೆ. ಆದೇಶ 41 ಸಿಪಿಸಿ ಮೂಲ ತೀರ್ಪುಗಳ ಮೇಲಿನ ಮೇಲ್ಮನವಿಗಳ ಬಗ್ಗೆ ತಿಳಿಸುತ್ತದೆ. ವಿವಿಧ ನಿಯಮಗಳ ಪೈಕಿ, ಮೇಲ್ಮನವಿ ನ್ಯಾಯಾಲಯದ ನ್ಯಾಯಾಲಯದ ತೀರ್ಪು ಈ ಕೆಳಗಿನವುಗಳನ್ನು ಹೊಂದಿರಬೇಕೆಂದು ನಿಯಮ 31 ಆದೇಶಿಸುತ್ತದೆ:

(ಎ) ನಿರ್ಣಯದ ಅಂಶಗಳು;

(ಬಿ) ಅದರ ಮೇಲೆ ನಿರ್ಧಾರ;

(ಸಿ) ನಿರ್ಧಾರಕ್ಕೆ ಕಾರಣಗಳು; ಮತ್ತು

(ಡಿ) ಮೇಲ್ಮನವಿ ಸಲ್ಲಿಸಲಾದ ಐತೀರ್ಪು ಹಿಂತಿರುಗಿಸಿದಲ್ಲಿ ಅಥವಾ ಬದಲಿಸಿದಲ್ಲಿ, ಮೇಲ್ಮನವಿದಾರ ಯಾವ ಪರಿಹಾರಕ್ಕೆ ಅರ್ಹನಾಗಿರುತ್ತಾನೆ.

4. ಮೇಲ್ಮನವಿ ನ್ಯಾಯಾಲಯ ವಿಚಾರಣೆ ನ್ಯಾಯಾಲಯದ ತೀರ್ಮಾನಗಳನ್ನು ಹಿಂತಿರುಗಿಸಲು ಅಥವಾ ದೃಢೀಕರಿಸಲು ನ್ಯಾಯವ್ಯಾಪ್ತಿಯನ್ನು ಹೊಂದಿದೆ.ಮೊದಲ ಮೇಲ್ಮನವಿಯು ಪಕ್ಷಕಾರರ ಅಮೂಲ್ಯವಾದ ಹಕ್ಕಾಗಿದೆ ಮತ್ತು ಕಾನೂನಿನಿಂದ ನಿರ್ಬಂಧಿತವಾಗದ ಹೊರತು, ಇಡೀ ಪ್ರಕರಣವು ವಿಷಯ ಮತ್ತು ಕಾನೂನಿನ ಎರಡೂ ಪ್ರಶ್ನೆಗಳ ಮರುಪರಿಶೀಲನೆಗೆ ಮುಕ್ತವಾಗಿದೆ.ಆದ್ದರಿಂದ, ಮೇಲ್ಮನವಿ ನ್ಯಾಯಾಲಯದ ತೀರ್ಪಿನಲ್ಲಿ, ಮೇಲ್ಮನವಿ ನ್ಯಾಯಾಲಯ ಎಲ್ಲಾ ವಿವಾದಾಂಶಗಳ ಮೇಲೆ ಹಾಗೂ ಪಕ್ಷಗಳು ಮಂಡಿಸಿದ ವಾದಗಳ ಮೇಲೆ, ಕಾರಣಗಳಿಂದ ಬೆಂಬಲಿತವಾದ ಹಾಗೂ ಪ್ರಜ್ಞಾಪೂರ್ವಕ ನಿರ್ಣಯವನ್ನು ನೀಡಬೇಕು. ಮೊದಲ ಮೇಲ್ಮನವಿಯ ನ್ಯಾಯಾಲಯವಾಗಿದ್ದುಕೊಂಡು ,

ತನ್ನ ತೀರ್ಮಾನಗಳನ್ನು ದಾಖಲಿಸುವ ಮೊದಲು ಎಲ್ಲಾ ವಿವಾದಾಂಶಗಳು ಮತ್ತು ಪಕ್ಷಗಳು ನೀಡಿದ ಪುರಾವೆಗಳನ್ನು ಪರಿಗಣಿಸುವುದು ಉಚ್ಚ ನ್ಯಾಯಾಲಯದ ಕರ್ತವ್ಯವಾಗಿತ್ತು. ಮೊದಲ ಮೇಲ್ಮನವಿಯು ಒಂದು ಮೌಲ್ಯಯುತವಾದ ಹಕ್ಕಾಗಿದೆ ಮತ್ತು ಕಾನೂನಿನ ಪ್ರಶ್ನೆಗಳು ಮತ್ತು ವಾಸ್ತವಾಂಶಗಳೆರಡರಲ್ಲೂ ಪಕ್ಷಕಾರರ ಪರ ವಾದ ವಿವಾದಗಳನ್ನು ಕೇಳಿದ ನಂತರ ಎಲ್ಲಾ ವಿವಾದಾಂಶಗಳ ಮೇಲೆ ಹಾಗೂ ವಾದಗಳ ಮೇಲೆ ತನ್ನ ತೀರ್ಮಾನವನ್ನು ಅದಕ್ಕೆ ಸಮರ್ಥಿಸುವ ಕಾರಣಗಳನ್ನು ನೀಡಬೇಕು. (ಸಂತೋಷ್ ಹಜಾರಿ ವಿರುದ್ಧ ಪುರುಷೋತ್ತಮ್ ತಿವಾರಿ [(2001) 3 ಎಸ್. ಸಿ. ಸಿ. 179, (2001) 1 ಎಸ್ಸಿಆರ್ 948], ಎಸ್.ಸಿ.ಸಿ . ಪೇ.188, ಪ್ಯಾರ 15 ಮತ್ತು ಮಧುಕರ್ ವಿ. ಸಂಗ್ರಾಮ್ [(2001) 4 ಎಸ್.ಸಿ.ಸಿ. 756] ಎಸ್ಸಿಸಿ ಪೇ. 758, ಪ್ಯಾರ 5.)"

18. ಶಶಿಧರ್ ಮತ್ತು ಇತರರು ವಿರುದ್ಧ ಅಶ್ವನಿ ಉಮಾ ಮಠದ್ ಮತ್ತು ಇನ್ನೊಬ್ಬರು 9= (2015) 11 ಎಸ್.ಸಿ.ಸಿ.269 ಇದರಲ್ಲಿ, ಈ ಕೆಳಗಿನಂತೆ ನಿರ್ಣಯಿಸಲಾಯ್ತು:-

"21.ಆದ್ದರಿಂದ, ಮೊದಲ ಮೇಲ್ಮನವಿ ನ್ಯಾಯಾಲಯವಾಗಿದ್ದು, ಮೇಲೆ ತಿಳಿಸಲಾದ ಆದೇಶ 41 ನಿಯಮ 31 ಹಾಗೂ 96ನೇ ಕಲಂ ಅಡಿಯಲ್ಲಿ ತನಗೆ ನೀಡಲಾದ ವ್ಯಾಪ್ತಿ ಮತ್ತು ಅಧಿಕಾರಗಳನ್ನು ಗಮನದಲ್ಲಿಟ್ಟುಕೊಂಡು ಮೊದಲ ಮೇಲ್ಮನವಿಯನ್ನು ನಿರ್ಧರಿಸುವುದು ಉಚ್ಚ ನ್ಯಾಯಾಲಯದ ಕರ್ತವ್ಯವಾಗಿತ್ತು.ದುರದೃಷ್ಟವಶಾತ್ ಇದನ್ನು ಮಾಡಲಾಗಲಿಲ್ಲ, ಇದರಿಂದಾಗಿ, ವಾಸ್ತವಾಂಶಗಳು ಮತ್ತು ಕಾನೂನಿನ ಮೇಲೆ ಮೊದಲ ಮೇಲ್ಮನವಿಯನ್ನು ಸಲ್ಲಿಸಿದ ಮೇಲ್ಮನವಿದಾರರಿಗೆ ವಿರುದ್ಧ ಪರಿಣಾಮ ಬೀರಿತು ಮತ್ತು ಅವರಿಂದ ಕಾನೂನಿನ ಪ್ರಕಾರದ ಮೇಲ್ಮನವಿಯ ವಿಚಾರಣೆಯನ್ನು ಕಸಿದುಕೊಂಡಿತು."

19. ಮೊದಲ ಮೇಲ್ಮನವಿ ನ್ಯಾಯಾಲಯ ತೀರ್ಪು ನಿರ್ಧರಿಸಲು ಅಂಶಗಳನ್ನು ನಿಗದಿಪಡಿಸಬೇಕು, ಅವುಗಳ ಮೇಲೆ ತನ್ನ ನಿರ್ಧಾರ ದಾಖಲಿಸಬೇಕು ಮತ್ತು ತನ್ನದೇ ಆದ ಕಾರಣಗಳನ್ನು ನೀಡಬೇಕು ಎಂಬುದು ಮೇಲಿನ ನಿಬಂಧನೆಗಳಿಂದ ಮತ್ತು ಈ ನ್ಯಾಯಾಲಯದ ನಿರ್ಧಾರಗಳಿಂದ ಸ್ಪಷ್ಟವಾಗಿದೆ.ಮೊದಲ ಮೇಲ್ಮನವಿ ನ್ಯಾಯಾಲಯವು ವಿಚಾರಣೆ ನ್ಯಾಯಾಲಯದ ತೀರ್ಪನ್ನು ದೃಢೀಕರಿಸಿದರೂ ಸಹ, ಆದೇಶ XLI ನಿಯಮ 31ರ ಆವಶ್ಯಕತೆಗಳನ್ನು ಅನುಸರಿಸಬೇಕಾಗುತ್ತದೆ ಮತ್ತು ಈ ಅಗತ್ಯವನ್ನು ಪಾಲಿಸದಿರುವುದು ಮೊದಲ ಮೇಲ್ಮನವಿ ನ್ಯಾಯಾಲಯ ತೀರ್ಪಿನಲ್ಲಿ ದೌರ್ಬಲ್ಯಕ್ಕೆ ಕಾರಣವಾಗುತ್ತದೆ.ನಿಸ್ಸಂದೇಹವಾಗಿ, ಮೇಲ್ಮನವಿ ನ್ಯಾಯಾಲಯ ಪುರಾವೆ ಬಗ್ಗೆ ವಿಚಾರಣೆ ಮಾಡಿ ವಿಚಾರಣಾ ನ್ಯಾಯಾಲಯದ ಅಭಿಪ್ರಾಯಗಳನ್ನು ಒಪ್ಪಿಕೊಂಡಾಗ, ಅದು ಪುರಾವೆ ಪರಿಣಾಮವನ್ನು ಪುನರಾವರ್ತಿಸುವ ಅಗತ್ಯವಿಲ್ಲ ಅಥವಾ ವಿಚಾರಣೆ ನ್ಯಾಯಾಲಯವು

ನೀಡಿದ ಕಾರಣಗಳನ್ನು ಪುನರುಚ್ಚರಿಸುವ ಅಗತ್ಯವಿಲ್ಲ.ವಿಚಾರಣೆ ನ್ಯಾಯಾಲಯವು ನೀಡಿದ ಕಾರಣಗಳಿಗೆ ಸಾಮಾನ್ಯ ಸಹಮತ ವ್ಯಕ್ತಪಡಿಸಿದಲ್ಲಿ ಸಾಕಾಗುತ್ತದೆ.

20. ಮೇಲ್ಕಂಡ ತತ್ವಗಳನ್ನು ಗಮನದಲ್ಲಿಟ್ಟುಕೊಂಡು, ಪ್ರಸ್ತುತ ಪ್ರಕರಣವನ್ನು ಪರಿಶೀಲಿಸೋಣ.ಮೇಲೆ ತಿಳಿಸಿದಂತೆ, ಒಪ್ಪಂದದ ತನ್ನ ಭಾಗವನ್ನು ನಿರ್ವಹಿಸಲು ವಾದಿಯ ಸಿದ್ಧತೆ ಮತ್ತು ಇಚ್ಛೆಗೆ ಸಂಬಂಧಿಸಿದ ವಿಷಯ ಮತ್ತು ಕಾಲ ಪರಿಮಿತಿಗೆ ಸಂಬಂಧಿಸಿದ ವಿವಾದಾಂಶಗಳನ್ನು ವಾದಿಗೆ ವಿರುದ್ಧವಾಗಿ ಉತ್ತರಿಸಲಾಗಿದೆ ಮತ್ತು ತದನುಸಾರವಾಗಿ ದಾವೆಯನ್ನು ವಜಾಗೊಳಿಸಲಾಯಿತು. ಉಚ್ಚ ನ್ಯಾಯಾಲಯದ ಮುಂದೆ ಸಲ್ಲಿಸಲಾಗಿದ್ದ ಮೇಲ್ಮನವಿಯು ಕಾನೂನು ಮತ್ತು ವಾಸ್ತವಾಂಶಗಳೆರಡರ ವಿವಾದಿತ ಪ್ರಶ್ನೆಗಳನ್ನು ಒಳಗೊಂಡಿತ್ತು.ಈ ಯಾವುದೇ ಅಂಶಗಳನ್ನು ಪರಿಶೀಲಿಸದೆ ಉಚ್ಚ ನ್ಯಾಯಾಲಯವು ಸಂಕ್ಷಿಪ್ತ ಆದೇಶ ಮೂಲಕ ಮೇಲ್ಮನವಿಯನ್ನು ವಜಾಗೊಳಿಸಿದೆ.ಕೆಳ ನ್ಯಾಯಾಲಯವು ಪಕ್ಷಗಳ ಪುರಾವೆ ಮರುಪರಿಶೀಲಿಸಿಲ್ಲ, ಅಥವಾ ತರ್ಕಬದ್ಧವಾದ ಆದೇಶ ಹೊರಡಿಸಿಲ್ಲ.ಮೇಲ್ಮನವಿಯನ್ನು ನಿರ್ಧರಿಸುವಾಗ ಉಚ್ಚ ನ್ಯಾಯಾಲಯವು ಸಿಪಿಸಿಯ ಆದೇಶ ಎಕ್ಸ್ಎಲ್ಐ ನಿಯಮ 31ರ ನಿಬಂಧನೆಗಳನ್ನು ಅನುಸರಿಸುವಲ್ಲಿ ವಿಫಲವಾಗಿದೆ ಹಾಗೂ ಕಾಲ ಪರಿಮಿತಿ ಕಾಯ್ದೆಯ ಅನುಸೂಚಿಯ 54 ರ ಅಡಿಯಲ್ಲಿ ಈ ದಾವೆಯು ಸಮಯದೊಳಗೆ ಇದೆ ಎಂದು ಭಟ್ ವಾದಿಸಿದ್ದಾರೆ. ಈ ಪ್ರಶ್ನೆಯನ್ನು ಸಹ ಅದರ ಸರಿಯಾದ ದೃಷ್ಟಿಕೋನದಲ್ಲಿ ಪರಿಶೀಲಿಸಲಾಗಿಲ್ಲ.

21. ಪರಿಣಾಮವಾಗಿ, ಮೇಲ್ಮನವಿ ಯಶಸ್ವಿಯಾಗುತ್ತದೆ ಮತ್ತು ಅದಕ್ಕೆ ಅನುಗುಣವಾಗಿ ಭಾಗಶಃ ಅನುಮತಿಸಲಾಗುತ್ತದೆ. ಉಚ್ಚ ನ್ಯಾಯಾಲಯ ಆರ್. ಎಫ್. ಎ. 1731/2006 ರಲ್ಲಿ ದಿನಾಂಕ 9.2.2012ರ ನೀಡಿದ ಐತೀರ್ಪು ಮತ್ತು ತೀರ್ಪನ್ನು ರದ್ದುಪಡಿಸಲಾಗಿದೆ ಮತ್ತು ಈ ವಿಷಯವನ್ನು ಕಾನೂನಿನ ಪ್ರಕಾರ ಹೊಸದಾಗಿ ಇತ್ಯರ್ಥಪಡಿಸಲು ಉಚ್ಚ ನ್ಯಾಯಾಲಯಕ್ಕೆ ಕಳುಹಿಸಲಾಗಿದೆ.

22. ಪಕ್ಷಗಳ ಎಲ್ಲಾ ವಾದಗಳನ್ನು ಮುಕ್ತವಾಗಿ ಬಿಡಲಾಗಿದೆ. ವೆಚ್ಚಗಳ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

ಮೇಲ್ಮನವಿಯನ್ನು ಭಾಗಶಃ ಅನುಮೋದಿಸಲಾಯಿತು ಮತ್ತು ಉಚ್ಚ ನ್ಯಾಯಾಲಯಕ್ಕೆ ಒಪ್ಪಿಸಲಾಯಿತು.